# ಜ್ಞಾನಶಕ್ತಿ
## ಮಾಸ ಪತ್ರಿಕೆ
## JNANASHAKTHI




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಮಾರ್ಚ್ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ 3 ಪ್ರಕಟಣೆ : 9-03-2022


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಕಾಂತಾವರ ಶ್ರೀ ಜಯಪ್ರಕಾಶ್ ಮತ್ತು ಶ್ರೀಮತಿ ಶ್ರೀಲತಾ ದಂಪತಿಗಳು ತಮ್ಮ 52ನೇ ವಿವಾಹ ವಾರ್ಷಿಕೋತ್ಸವದ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ, ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** ದೇಣಿಗೆ ನೀಡಿದ್ದಾರೆ. ಅವರ ಮಗಳು ಶ್ರೀಮತಿ ಶೀತಲ್ ರಾವ್ ಮತ್ತು ಅಳಿಯ ಡಾ| ಅಶುತೋಷ್ ತಮ್ಮ 30ನೇ ವಿವಾಹ ವಾರ್ಷಿಕೋತ್ಸವದ ಸವಿನೆನಪಿಗಾಗಿ ಹಾಗೂ ಹಿರಿಯವರಾದ ತಂತ್ರಾಡಿ ಶ್ರೀ ಮಹಾಬಲೇಶ್ವರ ಶಾನುಭೋಗ್ ಮತ್ತು ಶ್ರೀಮತಿ ಚಂದ್ರಮ್ಮರವರ ಸ್ಮರಣಾರ್ಥ ರೂ. **4,00,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಶ್ರೀ ವೇಣುಗೋಪಾಲ ಶಾನುಭೋಗ್, ಶ್ರೀ ಶಾಮಪ್ರಸಾದ್ ಶಾನುಭೋಗ್ ಮತ್ತು ಶ್ರೀ ಕೃಷ್ಣ ಮೋಹನ್ ಶಾನುಭೋಗ್ ತಮ್ಮ ತಂದೆ ಕೂಡ್ಲು ವಿಷ್ಣು ಶಾನುಭೋಗ್ ಸ್ಮರಣಾರ್ಥ ಶ್ರೀ ಸಭಾದ ಸ್ಕೋಲರ್ಸ್ ಡೇ ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ಇನ್ನ ಚಂದ್ರಕಾಂತ್ ರಾವ್, M.R.P.L. ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಪ್ರಸಾದ್ ಬಿ.ಎಚ್.ವಿ., ಅತಿಥಿಗಳಾದ ಡಾ| ರಾಜೇಶ್ ಪಾದೇಕಲ್ ಉಪಸ್ಥಿತರಿದ್ದರು.






ಶ್ರೀ ಸುಬ್ರಹ್ಮಣ್ಯ ಚಾರಿಟೇಬಲ್ ಟ್ರಸ್ಟ್ ನಿರ್ದೇಶಕಿ ಡಾ| ಜಯಲಕ್ಷ್ಮೀ ಶ್ರೀ ಸಭಾದ ಸ್ಕೋಲರ್ಸ್ ಡೇ ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **25,000/-** ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು. 'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು, ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ.

ಚಿತ್ರ : ಶ್ರೀ ರಘುವೀರ್ ಪೆರ್ಡೂರು

## ಬದುಕು - ಜತೆ ಜತೆಯಲಿ



**ವಿವಾಹ ಮಹೋತ್ಸವ**
ನಿಮ್ಮೀರ್ವರ ಬದುಕಿನ ಸಂಭ್ರಮವಾಗಲಿ
'ನಾನು' – 'ನೀನು' ಬೆಸೆದು
'ನಾವು' ಎಂದಾಗಲಿ
ಬದುಕು ಬಂಗಾರವಾಗಲಿ
ನಿತ್ಯೋತ್ಸವವಾಗಲಿ.

ಮಂಗಳೂರು ನಿವಾಸಿ ಶ್ರೀಮತಿ ಸರೋಜಾದೇವಿ ಮತ್ತು
ಶ್ರೀ ಗಣೇಶ್ ಎಸ್. ಇವರ ಸುಪುತ್ರಿ **ಚಿ| ಸೌ| ಅನುಷಾ**
ಇವರ ವಿವಾಹವು ದಿ| ರಾಮಕೃಷ್ಣನ್ ಕೆ. ಕೆ. ಮತ್ತು ಶ್ರೀಮತಿ ಜ್ಯೋತಿಯವರ
ಸುಪುತ್ರ **ಚಿ| ನಿಖಿಲ್**ರೊಂದಿಗೆ ತಾರೀಕು **20-02-2022**ನೇ ರವಿವಾರ
ಮಂಗಳೂರಿನ 'ಪತ್ತುಮುಡಿಸೌಧ ಶ್ರೀ ಲಕ್ಷ್ಮೀ ಕಲ್ಯಾಣ ಮಂಟಪ'ದಲ್ಲಿ ನೆರವೇರಿತು.

ನೂತನ ವಧೂವರರನ್ನು ಭಗವಂತನು ಅಷ್ಟೈಶ್ವರ್ಯ ನೀಡಿ ಹರಸಲಿ ಎಂದು ಹಾರೈಸೋಣ.



ಶ್ರೀಮತಿ ವೇದಾ ಜೆ. ಭಟ್; ಶ್ರೀಮತಿ ಉಷಾ ಪ್ರಭಾಕರ್ ರಾವ್
ಶ್ರೀಮತಿ ವಿಜಯಾ ಎಸ್. ಭಟ್; ಶ್ರೀ ಪಿ. ಶ್ರೀನಿವಾಸ್ ರಾವ್
ಶ್ರೀಮತಿ ವಸಂತಿ ಎಸ್. ರಾವ್; ಶ್ರೀ ಪಿ. ಶ್ರೀಕಾಂತ್ ರಾವ್
ಮತ್ತು ಮಂಗಳೂರು 'ವಿಜಯ ನಿವಾಸ'ದ ಎಲ್ಲಾ ಸದಸ್ಯರು

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು
ಬಿಜೈ ರಸ್ತೆ, ಮಂಗಳೂರು



ಸಮಾಜ ಬಾಂಧವರೇ,

ದಿನಾಂಕ **15-04-2022**ನೇ ಶುಕ್ರವಾರದಂದು
ಶ್ರೀ ಸಭಾದ ವತಿಯಿಂದ
ಶ್ರೀ ಶ್ರೀ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ
**ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ ಕಾರ್ಯಕ್ರಮಗಳನ್ನು**
ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಆಚರಿಸಲಾಗುವುದು.
ಆ ಪ್ರಯುಕ್ತ



**'ಲಕ್ಷ ಗಾಯತ್ರೀ ಹೋಮ'**



ಮತ್ತು ಶ್ರೀರಾಮ ದೇವರಿಗೆ ಕಲಶಾಭಿಷೇಕ
ಹಾಗೂ ಕಲ್ಪೋಕ್ತ ಪೂಜೆ ನಡೆಯಲಿದೆ.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು


(ವಿವರ ಒಳಗಿನ ಪುಟದಲ್ಲಿದೆ)


- ಮನುಷ್ಯನ ಬೆಳವಣಿಗೆಗೆ ಬೇಕಾದಷ್ಟು ಸ್ವಾರ್ಥವು ಅವನಲ್ಲಿರಬೇಕು. ಆದರೆ ಮಿತಿ ಮೀರಿದ ಸ್ವಾರ್ಥವಿರಕೂಡದು. – ಶಿವರಾಮ ಕಾರಂತ
- ಸ್ವ-ಸಹಾಯದಲ್ಲಿ ನಂಬಿಕೆ ಇರುವವರಿಗೆ ದೇವರು ಕೂಡಾ ಸಹಾಯ ಮಾಡುತ್ತಾನೆ.

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ

e-mail :
jnanashakthisss@gmail.com
whatsapp : 7795116598
Mobile : 9343361618

## ಉಡುಪಿ ಜಿಲ್ಲಾ ಕೃಷಿಕ ಸಂಘ, ಉಡುಪಿ

'ಕೃಷಿತೋ ನಾಸ್ತಿ ದುರ್ಭಿಕ್ಷಮ್' ಎಂಬ ಉಕ್ತಿಯಂತೆ ನಡೆವ

**ಶ್ರೀ ಅಶ್ವತ್ ಹೆಬ್ಬಾರ್ ಪೆರ್ಡೂರು** ಇವರಿಗೆ

## ❊ ಅಭಿನಂದನೆ ❊



ಇವರು ತಮ್ಮ ಕೃಷಿ ಭೂಮಿಯಲ್ಲಿ ನಿಷ್ಠೆ, ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ. ಸಾವಯವ ಗೊಬ್ಬರ, ವೈಜ್ಞಾನಿಕ ಕೃಷಿ, ಸಮಗ್ರ ಕೃಷಿ ಅನುಸರಿಸುವುದರ ಮೂಲಕ ಕೃಷಿ ಲಾಭದಾಯಕ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ವೈವಿಧ್ಯಮಯ ಬೆಳೆಗಳನ್ನು ಮಾಡಿ, ಭೂಮಿಯನ್ನು ಹಸನುಗೊಳಿಸಿ, ಪ್ರಕೃತಿಮಾತೆಯ ಕೃಪೆಗೆ ಒಳಗಾಗಿದ್ದಾರೆ. ವಿವಿಧ ಸಂಘ ಸಂಸ್ಥೆಗಳಲ್ಲಿ, ಹಲವು ಉಪಕಸುಬುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೃಷಿಕ ಸಂಘದಲ್ಲಿ ಸಕ್ರಿಯರಾಗಿದ್ದಾರೆ. ಸಂಘದ ಹೋರಾಟವಿರಲಿ, ಮಾಹಿತಿ ಶಿಬಿರವಿರಲಿ, ಸಮಾವೇಶವಿರಲಿ ಹೀಗೆ ಎಲ್ಲದರಲ್ಲೂ ತಪ್ಪದೇ ಭಾಗವಹಿಸುವುದರ ಮೂಲಕ ಉತ್ತಮ ಕಾರ್ಯಕರ್ತರು ಎನಿಸಿಕೊಂಡಿದ್ದಾರೆ.

ಹೀಗೆ ಸರಳ ವ್ಯಕ್ತಿತ್ವ, ಹಸನ್ಮುಖಿ, ಕಾಯಕದಲ್ಲಿ ನಿಷ್ಠೆ, ಪ್ರಾಮಾಣಿಕತೆಯನ್ನು ಗುರುತಿಸಿ ಜಿಲ್ಲಾ ರೈತ ಸಮಾವೇಶ 2021ರಂದು ಗಣ್ಯರ ಸಮ್ಮುಖದಲ್ಲಿ 'ಜಿಲ್ಲಾ ಮಟ್ಟದ ಸಾಧನಾಶೀಲ ಪ್ರಶಸ್ತಿ' ಪತ್ರವನ್ನು ನೀಡಿ ಗೌರವಿಸಲಾಯಿತು.

ಶ್ರೀ ದೇವರು ಇವರಿಗೆ, ಇವರ ಕುಟುಂಬಕ್ಕೆ ಆಯುರಾರೋಗ್ಯ, ಐಶ್ವರ್ಯ, ನೆಮ್ಮದಿಯನ್ನು ನೀಡಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು / ಕಾರ್ಯದರ್ಶಿ / ಸರ್ವಸದಸ್ಯರು, ಉಡುಪಿ ಜಿಲ್ಲಾ ಕೃಷಿಕ ಸಂಘ, ಉಡುಪಿ**

## ತುಲನಾತ್ಮಕ ವಿಮರ್ಶೆ

**ಇಂದಿನ ಅಪಾರವಾದ ಮಾಹಿತಿಯ ಪ್ರವಾಹದಲ್ಲ ಸತ್ಯವು ಬಹುಸುಲಭವಾಗಿ ಮುಳುಗಿಹೋಗುತ್ತದೆ.**

**ಇಂದು ಅಪಪ್ರಚಾರದ ವಿಷಬೀಜಗಳನ್ನು ಬಿತ್ತಲೂ ನೆಲ ಫಲವತ್ತಾಗಿದೆ. ಇಂತಹ ಪರಿಸ್ಥಿತಿಯಲ್ಲ ನಮ್ಮ ಎದುರು ಮೆರೆಯುವ ಅಭಿಪ್ರಾಯಗಳ ವಿಷಯದಲ್ಲ ಮನಸ್ಸಿನ ಎಚ್ಚರ ಅತ್ಯವಶ್ಯ.**

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜರುಗಿದ ನೂಂಜ ಮೋಹನ್ ರಾಯರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಶ್ರೀಮತಿ ಸ್ನೇಹಲತಾ ದಿವಾಕರ್ ಅವರಿಂದ ನುಡಿನಮನ



ಬದುಕಿನ ರಹಸ್ಯದ ಸತ್ಯಕ್ಕೆ ಶರಣಾಗಿ ಜೀವನವನ್ನು ಹೂವಿನಂತೆ ಹಗುರವಾಗಿಸಿ ಯಾರ ಹೆಗಲಿಗೂ ಭಾರವಾಗದೇ ವಿಶ್ವಶಾಂತಿಗೆ ಶರಣಾಗಿ ವಿಶ್ವದ ಆತ್ಮವೇ ಆಗಿರುವ ದಿವ್ಯ ಶಕ್ತಿಯೊಂದಿಗೆ ಐಕ್ಯವಾಗಿರುವ **ನೂಂಜ ಮೋಹನ ರಾವ್** ಅವರಿಗೆ ಶ್ರೀಮತಿ ಸ್ನೇಹಲತಾ ದಿವಾಕರ್ ಅವರು ಶ್ರದ್ಧಾಂಜಲಿಯ ನುಡಿನಮನಗಳನ್ನು ಅರ್ಪಿಸಿದರು. ಅಗಲಿದ ಆತ್ಮದ ಬಗ್ಗೆ ಒಳ್ಳೆಯ ಮಾತುಗಳನ್ನು ಆಡುವುದು, ಒಳ್ಳೆಯ ಮಾತುಗಳನ್ನು ಕೇಳುವುದು ಇದು ಒಂದು ಸುಯೋಗ. ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೂಂಜ ಮೋಹನ ರಾಯರು ಒಂದಷ್ಟು ಕಾಲ ಶ್ರೀ ಸುಬ್ರಹ್ಮಣ್ಯ ಸಭಾದ ಕಚೇರಿಯ ನಿರ್ವಾಹಕರಾಗಿದ್ದರು.

***ಜ್ಞಾನಶಕ್ತಿಯು ನೂಂಜ ಮೋಹನ ರಾಯರ ಆತ್ಮಕ್ಕೆ ಚಿರಶಾಂತಿಯನ್ನು ಬಯಸುತ್ತದೆ.***

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

The RIGHT Place for the Customer
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com



**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Prop. : P. Srikanth Rao
Mobile : 9343361618
**M/s. SAMARPAN**
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4



## ಅಪಾರ ಕೀರ್ತಿ ಗಳಿಸಿ...



**ಕು| ಶ್ರುತಿ ಯು. ರಾವ್** ಇವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಯೋಗ ಹಾಗೂ ನ್ಯಾಚುರೋಪತಿ ಕೋರ್ಸಿನಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಗಳಿಸಿರುತ್ತಾರೆ. ಇವರು ಮೂಡಬಿದ್ರೆಯ ಆಳ್ವಾಸ್ ಯೋಗ ಮತ್ತು ನ್ಯಾಚುರೋಪತಿ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು, ಅಂತಿಮ ವರ್ಷದ ಪರೀಕ್ಷೆಯಲ್ಲಿಯೂ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಪಡೆದಿರುತ್ತಾರೆ.

ಇವರು ಉತ್ತಮ ಯೋಗಪಟು ಆಗಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇದರ ಹೊರತಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ 2021ನೇ ಸಾಲಿನ ಪ್ರತಿಭಾ ಪುರಸ್ಕಾರದಲ್ಲಿ – Achievers Award ಪಡೆದಿರುತ್ತಾರೆ.

ಇವರು ಮಂಗಳೂರಿನ ನಿವಾಸಿಯಾಗಿರುವ ಶ್ರೀ ಆರೂರು ಉಪೇಂದ್ರ ರಾವ್ (ಉಪ ವ್ಯವಸ್ಥಾಪಕರು, KMF, ಮಂಗಳೂರು) ಹಾಗೂ ಶ್ರೀಮತಿ ವೀಣಾ ಯು. ರಾವ್ ಇವರ ಸುಪುತ್ರಿ ಆಗಿರುತ್ತಾರೆ. ಇವರನ್ನು ಶ್ರೀ ಸುಬ್ರಹ್ಮಣ್ಯ ಸಭಾದ 'ಸ್ಕೋಲರ್ಸ್ ಡೇ' ಕಾರ್ಯಕ್ರಮದಲ್ಲಿ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

## ಶಿವಸದನಕ್ಕೆ ಕೊಡುಗೆ



ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ 10 ಕುರ್ಚಿಗಳನ್ನು ರೋಟರಿಯನ್ ಶ್ರೀ ಪ್ರವೀಣ್ ಉಡುಪರವರು ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ರೋಟರಿ ಕ್ಲಬ್, ಮಂಗಳೂರು ಹಿಲ್‌ಸೈಡ್ ಕಾರ್ಯದರ್ಶಿ ಶ್ರೀ ಮನೀಷ್ ಯು., ಮಂಗಳೂರು ಮಹಾನಗರಪಾಲಿಕೆಯ ಉಪಪೌರರಾದ ಶ್ರೀಮತಿ ಸುಮಂಗಲಾ ರಾವ್ ಉಪಸ್ಥಿತರಿದ್ದರು. *ಚಿತ್ರ : ಶ್ರೀ ರಘುವೀರ್ ಪೆರ್ಡೂರ್*


Phone : 0824 - 2440110, 2213946

**VISHRAM MOTORS (P.) LTD.**

**No. 4, Kodialbail Church Building**

**K. S. Rao Road, MANGALORE - 575 003**

***Authorised Dealers for :***

**Vijai Super GP 150 &**

**Vikram 3 Wheelers (Petrol & Diesel)**




## ಭವತೀ ಭಿಕ್ಷಾಂ ದೇಹಿ..



ಶ್ರೀ ಪ್ರಕಾಶ್ ಎಸ್. ರಾವ್ ಮತ್ತು ಶ್ರೀಮತಿ ರಜನಿ ಪ್ರಕಾಶ್‌ರವರ ಸುಪುತ್ರ **ಚಿ| ಪ್ರಜ್ವಲ್**‌ನ ಉಪನಯನವು ತಾ. 20–02–2022ನೇ ರವಿವಾರದಂದು ಬೆಂಗಳೂರಿನ ಕೂಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಮಂಟಪದಲ್ಲಿ ನೆರವೇರಿತು.

❖❖❖

ಶ್ರೀ ಪಿ. ಎನ್. ವೇಣುಗೋಪಾಲ್ ಮತ್ತು ಶ್ರೀಮತಿ ಅಕ್ಷತಾರವರ ಸುಪುತ್ರ **ಚಿ| ಗೌರವ್**‌ನ ಉಪನಯನವು ತಾರೀಕು 20–02–2022ನೇ ಭಾನುವಾರದಂದು ಶ್ರೀ ಅಖಿಲೇಶ್ವರ ಸನ್ನಿಧಿ ಪೊಳಲಿಯಲ್ಲಿ ನೆರವೇರಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ದಿ| ಉದ್ಯಾವರ ಅನಂತಕೃಷ್ಣ ರಾವ್ ಅವರ ಪತ್ನಿ **ಶ್ರೀಮತಿ ವಸಂತಿ** (86) ಇವರು ತಾರೀಕು 20–02–2022ನೇ ರವಿವಾರದಂದು ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಅವರು ಮಗ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

***



**ಶ್ರೀ ಹೊಸಕೋಟೆ ಹಿರಿಯಣ್ಣ ರಾವ್** (86) ನಿವೃತ್ತ ಶಿಕ್ಷಕ, ಇವರು ತಾರೀಕು 21–02–2022ರಂದು ಹೊಸಕೋಟೆ ಕಂಬದಕೋಣೆಯಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಗಂಡು ಮಕ್ಕಳು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಶ್ರೀ ತಂತ್ರಾಡಿ ಶಿವಾನಂದ ಶಾನುಭೋಗ್** (84) ಅವರು ತಾರೀಕು 22–02–2022ರಂದು ತಂತ್ರಾಡಿ, ಮಂದಾರ್ತಿಯಲ್ಲಿ ನಿಧನರಾದರು. ಅವರು ತಮ್ಮ ಪತ್ನಿ, ಮೂವರು ಗಂಡು ಮಕ್ಕಳು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



ಮೂಡುಬೆಟ್ಟು ಕಟಪಾಡಿ ಶ್ರೀ ಹರಿಶ್ಚಂದ್ರ ರಾವ್‌ರ ಪತ್ನಿ **ಶ್ರೀಮತಿ ಕೆ. ಗಿರಿಜಾ ರಾವ್** (70) ತಾರೀಕು 01–03–2022ರಂದು ನಿಧನ ಹೊಂದಿದರು. ಅವರು ತಮ್ಮ ಪತಿ, ಮೂವರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.


**PRAVEEN KUMAR ADYAPADY**

**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes : Civil, Criminal, Motor Vehicles, A.C., D.C. Cases, Land Conversion, Registration etc.**

ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : **9972989678**
**9448104174**

**ರವಿಕಿರಣ್ ಕ್ಕೊಲ,** ಬಿ.ಎ., ಎಲ್‌ಎಲ್.ಬಿ.

ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)

**2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ**

**ಪುತ್ತೂರು ತಾಲೂಕು, ದ. ಕ., 574 241**

**PREETHIKA AUTOMOBILES**

2493633
9845851573

*Wholesale & Retail Dealers in :*

***2 & 3 WHEELERS, SPARES & ACCESSORIES***

**KARANGALPADY, MANGALORE - 575 003**

***Dealers in :***


**Minda Switches, M. K. Products, Swiss Auto Products, Power Coils**

## ಹೊಸ ಬಾಳಿನ ಹೊಸಿಲಲಿ ನಿಂತಿರುವ...

ಮಂಗಳೂರು ಅಶೋಕನಗರ ನಿವಾಸಿ ಶ್ರೀಮತಿ ಸರೋಜಾದೇವಿ ಮತ್ತು ಶ್ರೀ ಗಣೇಶ್ ಎಸ್. ರವರ ಸುಪುತ್ರಿ **ಚಿ। ಸೌ। ಅನುಷಾ** ಇವರ ವಿವಾಹವು ದಿ। ರಾಮಕೃಷ್ಣನ್ ಕೆ. ಕೆ. ಮತ್ತು ಶ್ರೀಮತಿ ಜ್ಯೋತಿಯವರ ಸುಪುತ್ರ **ಚಿ। ನಿಖಿಲ್**ರೊಂದಿಗೆ ತಾರೀಕು 20–02–2022ನೇ ರವಿವಾರ ಮಂಗಳೂರಿನ 'ಪತ್ತುಮುಡಿಸೌಧ ಶ್ರೀ ಲಕ್ಷ್ಮೀ ಕಲ್ಯಾಣ ಮಂಟಪ'ದಲ್ಲಿ ನೆರವೇರಿತು.

---

**ಚಿ। ಸೌ। ಮಹಿಮಾ** (ಶ್ರೀಮತಿ ಚಂದ್ರಪ್ರಭಾ ಮತ್ತು ಶ್ರೀ ವಿಜಯ ಕುಮಾರ್‌ರವರ ಪುತ್ರಿ) ಹಾಗೂ **ಚಿ। ಅನ್ವೇಷ್** (ಶ್ರೀಮತಿ ವಿನಯ ಮತ್ತು ಶ್ರೀ ಕೃಷ್ಣಮೂರ್ತಿಯವರ ಪುತ್ರ) ಇವರ ವಿವಾಹ ಮಂಗಳೋತ್ಸವವು ತಾರೀಕು 20–02–2022ನೇ ರವಿವಾರ ಬೆಳ್ತಂಗಡಿಯ 'ಮಂಜುನಾಥ ಸ್ವಾಮಿ ಕಲಾಭವನ'ದಲ್ಲಿ ಗುರುಹಿರಿಯರ ಸಮ್ಮುಖದಲ್ಲಿ ನಡೆಯಿತು.

Muralidhara Rao Adyapadi
Proprietor
Mob : 94480 27259
99803 16434

**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325
**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**


ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

## ನಮ್ಮ ಹೆಮ್ಮೆಯ ಚಾಲಕರು





ಕ. ರಾ. ರ. ಸಾ. ನಿಗಮದ ಪುತ್ತೂರು ವಿಭಾಗದ ಧರ್ಮಸ್ಥಳ ಘಟಕದಲ್ಲಿ 29 ವರ್ಷಗಳಿಂದಲೂ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಾನಿಕ ಬ್ರಾಹ್ಮಣ ಸಮಾಜದ **ಶ್ರೀ ಜಯಪ್ರಕಾಶ್ ಬಿ.** (ಕೀರ್ತಿಶೇಷ ಕಾವಳಕಟ್ಟೆ ಶ್ರೀ ಬಿ. ಶಂಕರನಾರಾಯಣ ರಾವ್ ಮತ್ತು ಶ್ರೀಮತಿ ಶಾರದಾರವರ ಪುತ್ರ) ಇವರಿಗೆ **ಅಪಘಾತ ರಹಿತ ಚಾಲನೆಗಾಗಿ** ಸಂಸ್ಥೆಯ ವತಿಯಿಂದ ದಿನಾಂಕ 19–02–2022ರಂದು ಬೆಳ್ಳಿಪದಕ ನೀಡಿ ಗೌರವಿಸಿ ಸನ್ಮಾನಿಸಲಾಯಿತು.

ಪುತ್ತೂರಿನ ಹೆಮ್ಮೆಯ ಶಾಸಕರಾದ ಶ್ರೀ ಸಂಜೀವ ಮಠಂದೂರು ಇವರು ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು.

## ಕಾರ್ಕಳ ಸಂಘದ ಶಿವರಾತ್ರಿ



ಶ್ರೀ ಶಂಕರ ಪ್ರತಿಷ್ಠಾನ (ರಿ.), ಪ್ರಸಾದಭವನ, ಕಾರ್ಕಳ ಇದರ ವತಿಯಿಂದ ತಾ. 01–03–2022ರಂದು ಮಹಾಶಿವರಾತ್ರಿ ಪೂಜೆಯು ಸಂಘದ ಅಧ್ಯಕ್ಷರಾದ ಮಾನ್ಯ ಕೇಶವ ರಾವ್ ಇವರ ನೇತೃತ್ವದಲ್ಲಿ ನೆರವೇರಿತು. ಶಿವಪೂಜೆಯನ್ನು ಕ್ಷೀರ, ತುಪ್ಪ, ಸಕ್ಕರೆ, ಮೊಸರು ಮೊದಲಾದ ದ್ರವ್ಯಗಳಿಂದ ಅಭಿಷೇಕ ಮಾಡಿ ಬಿಲ್ವಪತ್ರೆ ನೈವೇದ್ಯವನ್ನು ಅರ್ಪಿಸಿ, ಉಪವಾಸ ವೃತ ಮಾಡಿದ ಎಲ್ಲರಿಂದಲೂ ಅರ್ಘ್ಯವನ್ನು ನೀಡುವುದರ ಮೂಲಕ ಕುಲಪುರೋಹಿತರಾದ ಯಾಜಿ ಡಾ। ನಿರಂಜನ ಭಟ್‌ರವರು ನೆರವೇರಿಸಿಕೊಟ್ಟರು. ಆಗಮಿಸಿದ ಸಮಾಜಬಾಂಧವರೆಲ್ಲರೂ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾದರು.

ಆಗಮಿಸಿದ ಎಲ್ಲರಿಗೂ ಶ್ರೀಮತಿ ಸಾವಿತ್ರಿ ಮನೋಹರ ರಾವ್‌ರವರು ಉಪಾಹಾರದ ಸಂಪೂರ್ಣ ವೆಚ್ಚವನ್ನು ಭರಿಸಿದರು ಹಾಗೂ ಉಪಾಹಾರದ ವ್ಯವಸ್ಥೆ ಮತ್ತು ಮೇಲುಸ್ತುವಾರಿಯನ್ನು ಶ್ರೀ ಭವಾನಿಶಂಕರ ದಂಪತಿಗಳು ವಹಿಸಿದರು. ಎಲ್ಲಾ ಸಮಾಜ ಬಾಂಧವ ಭಗವದ್ ಭಕ್ತರಿಗೆ ದೇವರು, ಸಿರಿ, ಆಯುಷ್ಯ, ಆರೋಗ್ಯ, ಸುಖ ಸೌಭಾಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾ ಆಗಮಿಸಿ ಸಹಕರಿಸಿದ ಎಲ್ಲರಿಗೂ ಕಾರ್ಯದರ್ಶಿ ಕೆ. ಹರಿಶ್ಚಂದ್ರ ರಾವ್ ಧನ್ಯವಾದ ಸಮರ್ಪಿಸಿದರು.

**ಶ್ರೀ ಶಂಕರ ಪ್ರತಿಷ್ಠಾನ (ರಿ.), ಪ್ರಸಾದ ಭವನ, ಕಾರ್ಕಳ**

### ಜ್ಞಾನ - ನುಡಿ

ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇಬೇಕೆಂದಿಲ್ಲ. ಆದರೆ ನಂಬಿಕೆ ಇದ್ದಲ್ಲಿ ಪ್ರೀತಿ ಇದ್ದೇ ಇರುವುದು. ***ಸಂತ ಕಬೀರ***

### ಜ್ಞಾನ - ಗಾದೆ

- ನೀರ್ ಜಪ್ಪಂದಿ ದೊಂಡೆಗ್ ಮೂಡೆ ನೂರಾಯಿ ಲೆಕ್ಕ
- ನೀರ್ ಇದ್ಯಂತಿ ಗುವೆಲ್‌ಗ್ ರಾಟೆ ಕಟ್ಟಿ ಲೆಕ್ಕ
- ನಟ್ಟುನಕ್ಲೆಗ್ ಊರು ಪೂರಾ ಅಣ್ಣೆರ್

### ಜ್ಞಾನ - ನಗೆ

*(ಹುಚ್ಚಾಸ್ಪತ್ರೆಗೆ ವಿಸಿಟ್ ಮಾಡಲು ಮಂತ್ರಿ ಬಂದ್ರು, ಎಲ್ಲ ಹುಚ್ಚರೂ ಅವರಿಗೆ ನಮಸ್ಕರಿಸಿದರು ಆದ್ರೆ, ಗುಂಡ ಮಾತ್ರ ನಮಸ್ಕಾರ ಮಾಡಲಿಲ್ಲ)*

**ಮಂತ್ರಿ** : ಅಲ್ಲಿ ಕೂತವನು ನನಗೆ ಯಾಕೆ ನಮಸ್ಕರಿಸಲಿಲ್ಲ?

**ಡಾಕ್ಟರ್** : ಅವನಿಗೆ ಮೊನ್ನೆ ತಾನೇ ಹುಚ್ಚು ಬಿಟ್ಟಿದೆ ಸರ್, ಡಿಸ್ಚಾರ್ಜ್‌ಗಾಗಿ ಕಾಯುತ್ತಿದ್ದಾನೆ!

### ಜ್ಞಾನ - ವಿಸ್ಮಯ

ಹೆಚ್ಚಿನ ಹುಲಿಗಳಿಗೆ ನೂರಕ್ಕಿಂತ ಹೆಚ್ಚು ಪಟ್ಟೆಗಳಿದ್ದು ಎಲ್ಲ ಹುಲಿಗಳು ವಿಭಿನ್ನವಾದ ಪಟ್ಟೆ ಹೊಂದಿರುತ್ತವೆ. ಹುಲಿಯ ಪಟ್ಟೆ ರೀತಿಯ ಆಧಾರದ ಮೇಲೆ ಕಾಡಿನಲ್ಲಿರುವ ಹುಲಿಗಳನ್ನು ಗುರುತಿಸಲಾಗುತ್ತದೆ.

ಭಾರತದ ಪ್ರಸಿದ್ಧ ತಳಿಯಾದ ಬಂಗಾಳ ಹುಲಿಗಳ ಒಂದು ಉಪಗುಂಪು ಹೊಳೆಯುವ ಚಿನ್ನದ ಮೈಬಣ್ಣವನ್ನು ಹೊಂದಿರುತ್ತವೆ. ಇವುಗಳ ಪಟ್ಟೆಯು ತಿಳಿ ಕಿತ್ತಳೆ ಬಣ್ಣದ್ದಾಗಿದ್ದು ತುಪ್ಪಳವು ಹೆಚ್ಚು ದಪ್ಪವಾಗಿರುತ್ತದೆ.

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಕೋಲರ್ಸ್ ಡೇ - Scholars day 2021




ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಹಲವಾರು ವರ್ಷಗಳಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುವ ಮೂಲಕ ನಮ್ಮ ಸಮಾಜದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿ ವೇತನವನ್ನು 'Scholars day' ಎಂಬ ನೂತನ ಕಾರ್ಯಕ್ರಮವನ್ನು ಆಯೋಜಿಸಿ, ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಾಗಾರವನ್ನು ಏರ್ಪಡಿಸಿ, Scholarship Chequeಗಳನ್ನು ವಿದ್ಯಾರ್ಥಿಗಳಿಗೆ ಮುಖತಃ ಕೊಡುವ ಸತ್‌ಸಂಪ್ರದಾಯವನ್ನು ಹಮ್ಮಿಕೊಂಡಿದೆ.

ಈ ವರುಷದ "Scholars day" ಕಾರ್ಯಕ್ರಮವು ಭಾನುವಾರ ತಾರೀಕು 27-02-2022ರಂದು ಶ್ರೀ ಸಭೆಯಲ್ಲಿ ನಡೆಯಿತು. ಹತ್ತಿರದ ದೂರದ ಊರುಗಳಿಂದ ಸುಮಾರು ನೂರಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಗಮಿಸಿ ತಮ್ಮ ಹೆಸರು ನೋಂದಾಯಿಸಿ, ಬೆಳಗ್ಗಿನ ಉಪಾಹಾರ ಸೇವಿಸಿ ತುಂಬಾ ಹುರುಪಿನಿಂದ ಭಾಗವಹಿಸಲು ಸಜ್ಜಾದರು.

ಸಮಯಕ್ಕೆ ಸರಿಯಾಗಿ ಉದ್ಘಾಟನಾ ಸಮಾರಂಭ ಕುಮಾರಿ ಶ್ರೇಯಳ ದೇವತಾ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ವಿದ್ಯಾರ್ಥಿ ಪ್ರತಿನಿಧಿಗಳ ಮತ್ತು ಆಹ್ವಾನಿತ ಗಣ್ಯರ ಸಹಯೋಗದಿಂದ ದೀಪ ಪ್ರಜ್ವಲನೆಗೊಳ್ಳುವ ಮೂಲಕ ಸಮಾರಂಭಕ್ಕೆ ವಿದ್ಯುಕ್ತ ಚಾಲನೆ ದೊರೆಯಿತು.

ಶ್ರೀ ಸುಬ್ರಹ್ಮಣ್ಯ ಸಭೆಯ ವಿದ್ಯಾಭ್ಯಾಸ ಸಮಿತಿಯ ಅಧ್ಯಕ್ಷರಾದ ಡಾ। ಎ. ಪಿ. ಕೃಷ್ಣ ಇವರು ನೆರೆದ ಎಲ್ಲಾ ವಿದ್ಯಾರ್ಥಿಮಿತ್ರರನ್ನೂ, ಅವರ ಪೋಷಕರನ್ನೂ, ಸಂಪನ್ಮೂಲ ವ್ಯಕ್ತಿಗಳನ್ನೂ, ಶ್ರೀ ಸಭಾದ ಆಡಳಿತ ಮಂಡಳಿಯ ಸದಸ್ಯರನ್ನೂ ಹಾಗೂ ಸಮಾಜದ ಎಲ್ಲಾ ಬಾಂಧವರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಡಾ। ಕೃಷ್ಣರವರು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಈ ರೀತಿಯ ಕಾರ್ಯಕ್ರಮದ ಹಿನ್ನೆಲೆ ಮತ್ತು ಔಚಿತ್ಯವನ್ನು ತಿಳಿಹೇಳಿದರು.

ರಾಜೀವಗಾಂಧಿ ಹೆಲ್ತ್ ಯೂನಿವರ್ಸಿಟಿಯ BNYS ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಹಾಗೂ ಚಿನ್ನದ ಪದಕ ಗಳಿಸಿದ ಡಾ। ಶ್ರುತಿಯವರ ಸಾಧನೆಯನ್ನು ಗುರುತಿಸಿ, ಈಕೆಯ ತಾಯಿ ಶ್ರೀಮತಿ ವೀಣಾ ಹಾಗೂ ತಂದೆ ಶ್ರೀ ಉಪೇಂದ್ರ ಇವರ ಉಪಸ್ಥಿತಿಯಲ್ಲಿ ಗಣ್ಯರಿಂದ ತುಂಬಿದ ಸಭೆಯಲ್ಲಿ ಸನ್ಮಾನಿಸಲಾಯಿತು. ಸಾಧಕರನ್ನು ಗುರುತಿಸಿ ಸನ್ಮಾನಿಸಿ ಗೌರವಿಸುವುದು ಶ್ರೀ ಸಭೆಯ ಸತ್‌ಸಂಪ್ರದಾಯ.

ಮೊದಲಿನ ಕಾರ್ಯಾಗಾರವನ್ನು ಶಾರದಾ ಯೋಗ ಮತ್ತು ನ್ಯಾಚುರೋಪತಿ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರಾದ ರಾಜೇಶ್ ಪಾದೇಕಲ್‌ರವರು ನಡೆಸಿಕೊಟ್ಟರು. ಯೋಗ ಮತ್ತು ನ್ಯಾಚುರೋಪತಿಯ ಮೂಲಕ ಹೇಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿ ಬೆಳೆಸಬಹುದೆಂಬುದನ್ನು ಸುಂದರವಾಗಿ ವಿವರಿಸಿದರು. ಎರಡನೇ ಹಂತದ ಕಾರ್ಯಾಗಾರ ಎಂ.ಆರ್.ಪಿ.ಎಲ್., ಮಂಗಳೂರು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಬಿ.ಹೆಚ್.ವಿ. ಪ್ರಸಾದ್ ಅವರು 'ನಮ್ಮ ಮನಸ್ಸಿನ ಧೋರಣೆ ನಾವು ಹೇಗೆ ಬದುಕಬೇಕೆಂಬುದನ್ನು ನಿರ್ಧರಿಸುತ್ತದೆ' ಎಂಬ ವಿಷಯದ ಬಗ್ಗೆ ತಮ್ಮ ಜೀವನ ಅನುಭವ ಹಾಗೂ ಇತರರ ಉದಾಹರಣೆಗಳೊಂದಿಗೆ ಧನಾತ್ಮಕ ಧೋರಣೆ ಹೇಗೆ ವ್ಯಕ್ತಿಗಳನ್ನು ಉತ್ತುಂಗಕ್ಕೆ ಏರಿಸಬಲ್ಲದೆಂಬುದನ್ನು ತಿಳಿಹೇಳಿದರು.

ಈ ಎರಡು ಕಾರ್ಯಾಗಾರದ ಬಳಿಕ ಬಿಡುವಿನಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಪುತ್ತೂರಿನಲ್ಲಿ ನಡೆಸಿಕೊಂಡು ಬರುವ ಹಿರಿಯ ನಾಗರಿಕರ ವಸತಿ ನಿಲಯಕ್ಕೆ ಶ್ರೀ ಕೂಡ್ಲು ವಿಷ್ಣು ಶ್ಯಾನುಭಾಗ್ ಅವರ ಸ್ಮರಣಾರ್ಥ ಅವರ ಮಕ್ಕಳು ದಾನವಾಗಿ ಕೊಟ್ಟ ಒಂದು ಲಕ್ಷ ರೂಪಾಯಿಯ ಚೆಕ್ ಅನ್ನು ಸಭೆಯ ಪದಾಧಿಕಾರಿಗಳು ಸ್ವೀಕರಿಸಿದರು. ದಾನಿಗಳಾದ ಶ್ರೀ ವೇಣುಗೋಪಾಲ್ ಶ್ಯಾನುಭಾಗ್, ಶ್ರೀ ಶ್ಯಾಮ್‌ಪ್ರಸಾದ್ ಶ್ಯಾನುಭಾಗ್ ಮತ್ತು ಶ್ರೀ ಕೃಷ್ಣಮೋಹನ್ ಶ್ಯಾನುಭಾಗ್‌ರನ್ನು ಅಭಿನಂದಿಸಲಾಯಿತು. ಸಮೂಹ ಚರ್ಚೆಯನ್ನು ಶ್ರೀ ಇನ್ನ ಚಂದ್ರಶೇಖರ್‌ರವರು ಬಹಳ ರಸವತ್ತಾಗಿ ನಡೆಸಿಕೊಟ್ಟರು.

ಆ ಬಳಿಕ ವಿದ್ಯಾರ್ಥಿ ವೇತನ ವಿತರಣೆ ಪ್ರಾರಂಭವಾಯಿತು. ಮೊದಲನೆಯದಾಗಿ ದಿ। ಕೂಡ್ಲು ಪ್ರೇಮಾವತಿ ಅಮ್ಮ ಮೆಮೋರಿಯಲ್ ಎಂಡೋಮೆಂಟ್ ಫಂಡ್‌ನ ವತಿಯಿಂದ MBBS ವಿದ್ಯಾರ್ಥಿಗೆ ಕೊಡಮಾಡುವ Scholarshipನ್ನು ಕುಮಾರಿ ಮೈತ್ರಿಗೆ ನೀಡಲಾಯಿತು. ಕೂಡ್ಲು ಕೇಶವ ಶ್ಯಾನುಭಾಗ್ ಮೆಮೋರಿಯಲ್ ಎಂಡೋಮೆಂಟ್‌ನಿಂದ ಚಾರ್ಟೆಡ್ ಅಕೌಂಟೆನ್ಸಿ ಮಾಡುತ್ತಿರುವ ವಿದ್ಯಾರ್ಥಿಗೆ ಕೊಡುವ Scholarshipನ್ನು ಕುಮಾರಿ ವೈಷ್ಣವಿಗೆ ವಿತರಿಸಲಾಯಿತು. ಬಿ.ಕಾಂ. 2ನೇ ವರ್ಷದಲ್ಲಿ ಕಲಿಯುತ್ತಿರುವ ಅನನ್ಯ ಮೂಡಿಗೆರೆ ಅವರಿಗೆ ಅಂಕಿತ ಅನಂತಪುರ ಕೊಡುವ ರೂ. 25,000/- ಚೆಕ್ಕನ್ನು ಶ್ರೀಮತಿ ಸುಮನ್ ಕೃಷ್ಣ ಹಸ್ತಾಂತರಿಸಿದರು. 8ನೇ ತರಗತಿಯಿಂದ ಹಿಡಿದು M.Sc.ತನಕದ ಸುಮಾರು 135 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ಚೆಕ್ ಅನ್ನು ಗಣ್ಯರು ವಿತರಿಸಿದರು. ಸಂಸ್ಕೃತ ವಿದ್ಯಾಭ್ಯಾಸ ಮಾಡುತ್ತಿರುವ ಮತ್ತು ವೇದಾಧ್ಯಯನ ಮಾಡುತ್ತಿರುವ 2 ವಿದ್ಯಾರ್ಥಿಗಳಿಗೆ ರೂ. 10,000/-ದ ಪ್ರೋತ್ಸಾಹ ಧನವನ್ನು ಕೊಡಲಾಯಿತು.

ಈ ವರ್ಷ 177 ವಿದ್ಯಾರ್ಥಿಗಳಿಗೆ ರೂ. 6,57,000/-ನ್ನು ವಿದ್ಯಾರ್ಥಿ ವೇತನವಾಗಿಯೂ, 55 ವಿದ್ಯಾರ್ಥಿಗಳಿಗೆ ರೂ. 66,40,000/-ನ್ನು ಸಾಲ ವಿದ್ಯಾರ್ಥಿವೇತನವಾಗಿಯೂ ಕೊಡಲಾಗಿದೆ. ಒಟ್ಟು 232 ವಿದ್ಯಾರ್ಥಿಗಳಿಗೆ 74 ಲಕ್ಷ 67 ಸಾವಿರ ವಿದ್ಯಾಭ್ಯಾಸ ಪ್ರೋತ್ಸಾಹಧನವಾಗಿ ವಿತರಿಸಲಾಯಿತು. ಇದು ಶ್ರೀ ಸಭೆಯ ಹೆಮ್ಮೆ ಹಾಗೂ ಹೆಗ್ಗಳಿಕೆ.

ಸಿಎ ನಾಗರಾಜ್ ಶರ್ಮಾರ ವಂದನಾರ್ಪಣೆಯೊಂದಿಗೆ Scholars dayಯ ಔಪಚಾರಿಕ ಸಮಾರಂಭ ಮುಕ್ತಾಯವಾಯಿತು. ಸ್ವಾದಿಷ್ಟ ಭೋಜನ ಸವಿದಾದ ಬಳಿಕ ವಿದ್ಯಾರ್ಥಿಗಳು ಪರಸ್ಪರ ಪರಿಚಯಿಸಿಕೊಳ್ಳುತ್ತಾ ವಿದಾಯ ಹೇಳುತ್ತಾ ವಿದ್ಯಾರ್ಥಿ ವೇತನದ ಚೆಕ್‌ನೊಂದಿಗೆ ತಮ್ಮ ತಮ್ಮ ಊರುಗಳಿಗೆ ತೆರಳಿದರು. ಶ್ರೀ ಗುರುಗಳ ಆಶೀರ್ವಾದದಿಂದ ಕಾರ್ಯಕ್ರಮ ಸುಸೂತ್ರವಾಗಿ ಯಶಸ್ವಿಯಾಗಿ ನಡೆಯಿತು ಎಂಬುದು ಸಂತಸದ ವಿಷಯ.


ಪತ್ರಿಕೆಗೆ ಶುಭ ಬಯಸುವ-



**ಶ್ರೀ ನಾಗರಾಜ್ ಶರ್ಮ**

ಹಾಗೂ

**ಶ್ರೀಮತಿ ಆರತಿ ಶರ್ಮ**

'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ

ಮಂಗಳೂರು - 575 002 ✆ : 9880258216

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**

**2nd Floor, Ozanam Complex, Church Building**
**Main Road, BAJPE, MANGALORE**



*We undertake all types of Electrical, Plumbing and Sanitary works*

॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

ಕೋಡಿಂಬಾಡಿ - 574 325, ಪುತ್ತೂರು ತಾಲೂಕು, ದ. ಕ.

ಆತ್ಮೀಯ ಭಗವದ್ಭಕ್ತರೇ, ತಾ. 10-02-2022

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ
ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರರಾದ
ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ
ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ
ಕೃಪಾಶೀರ್ವಾದಗಳೊಂದಿಗೆ

ಸ್ವಸ್ತಿ। ಶ್ರೀ ಪ್ಲವ ಸಂವತ್ಸರದ ಫಾಲ್ಗುನ ಪೌರ್ಣಮಿ ತಿಥಿ
ದಿನಾಂಕ **18-03-2022**ನೇ ಶುಕ್ರವಾರ

**ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವರ**

## ವಾರ್ಷಿಕ ಪ್ರತಿಷ್ಠಾ ಮಹೋತ್ಸವ
## ಮತ್ತು ಜಾತ್ರೋತ್ಸವ

ಶ್ರೀ ಕ್ಷೇತ್ರದ ತಂತ್ರಿಗಳಾದ ವೇದಮೂರ್ತಿ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀ
ಇವರ ನೇತೃತ್ವದಲ್ಲಿ ಜರಗಲಿದೆ.

ಈ ದೇವತಾ ಕಾರ್ಯಕ್ರಮಗಳಿಗೆ ಭಕ್ತಾಭಿಮಾನಿಗಳಾದ ತಾವೆಲ್ಲರೂ
ಶ್ರೀ ಕ್ಷೇತ್ರಕ್ಕೆ ಆಗಮಿಸಿ, ತನು–ಮನ–ಧನಗಳೊಂದಿಗೆ ಸಹಕರಿಸಿ,
ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ –

| ಯಂ. ನಾಗೇಶ ಶರ್ಮ | ಕೆ. ಕೃಷ್ಣ ರಾವ್ ಬೆಂಗಳೂರು | ಟಿ. ಅಣ್ಣಪ್ಪಯ್ಯ ತೆಂಕಿಲ |
|---|---|---|
| ಅರ್ಚಕರು | ಅಧ್ಯಕ್ಷರು | ಅಧ್ಯಕ್ಷರು |
| ✆ : 9901247080 | ಮತ್ತು ಸದಸ್ಯರು | ಮತ್ತು ಸದಸ್ಯರು |
| 9902022410 | ಜೀರ್ಣೋದ್ಧಾರ ಸಮಿತಿ | ಆಡಳಿತ ಸಮಿತಿ |

## ಕರ್ವಾಲಿನಲ್ಲಿ ಶ್ರೀ ಮನೋಹರ ಪ್ರಸಾದ್‌ಗೆ ಸನ್ಮಾನ



ದಿನಾಂಕ 19–02–2022ರಂದು ಕರ್ವಾಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಕೆ. ಅನಂತ ಪಟ್ಟಾಭಿರಾಯರ ಮನೆಯಲ್ಲಿ ನಡೆದ ಧಾರ್ಮಿಕ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಶ್ರೀ ಮನೋಹರ ಪ್ರಸಾದ್‌ರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀಮತಿ ಪ್ರಸನ್ನಕುಮಾರಿ, ಶ್ರೀ ಅಶ್ವಿನ್‌ಕುಮಾರ್, ಶ್ರೀಮತಿ ಚೈತ್ರ, ಪಟ್ಟಾಭಿರಾಯರ ಸಹೋದರಿಯರಾದ ಶ್ರೀಮತಿ ಜ್ಞಾನೇಶ್ವರಿ, ಶ್ರೀಮತಿ ಪುಷ್ಪಾವತಿ, ಶ್ರೀಮತಿ ಧಾರುಣಿದೇವಿ ಹಾಗೂ ಅವರ ಬಂಧು–ಬಾಂಧವರು, ಊರಿನ ಹಿತೈಷಿಗಳು ಉಪಸ್ಥಿತರಿದ್ದರು. ನಮ್ಮ ಕರ್ವಾಲು ಮನೆತನಕ್ಕೆ ಜಾಗತಿಕ ಮನ್ನಣೆ ತಂದ ಕೀರ್ತಿ ಮನೋಹರ ಪ್ರಸಾದ್‌ರವರಿಗೆ ಸಲ್ಲುತ್ತದೆ. ಕರ್ವಾಲು ಕ್ಷೇತ್ರದ ಮುಂಬರುವ ಬ್ರಹ್ಮಕಲಶ ಉತ್ಸವಕ್ಕೆ ಆರಂಭಿಕ ನಿಧಿಯಾಗಿ ರೂ. 25,000/– (ಇಪ್ಪತ್ತೈದು ಸಾವಿರ) ಚೆಕ್ ಅನ್ನು ಆಡಳಿತ ಮಂಡಳಿಗೆ ಅವರು ಹಸ್ತಾಂತರಿಸಿದರು.

ತನ್ನನ್ನು ಪ್ರೀತ್ಯಾದರಗಳಿಂದ ಕಂಡು ಗೌರವಿಸಿದುದ್ದಕ್ಕೆ ಸಂತೋಷದಿಂದ ಎದೆ ತುಂಬಿ ಬಂದಿದೆ ಎಂದು ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ ಅಭಿವೃದ್ಧಿ ಸಮಿತಿಯ ಗೌರವಾಧ್ಯಕ್ಷ ಶ್ರೀ ಯಚ್. ಯುವರಾಜ ನಾಯ್ಕ್, ಅಧ್ಯಕ್ಷ ಶ್ರೀ ಭೋಜ ಶೆಟ್ಟಿ, ಶ್ರೀ ಕೆ. ಹರಿಶ್ಚಂದ್ರ ರಾವ್, ಶ್ರೀ ಕೆ. ಸತೀಶ್ ರಾವ್, ಶ್ರೀ ಸುಧಾಕರ ಹೆಗ್ಡೆ ಉಪಸ್ಥಿತರಿದ್ದರು.

ಮೊ : 9739155359 *ಬರೆದವರು :* **ಶ್ರೀಮತಿ ಪುಷ್ಪಾ ಶ್ರೀನಿವಾಸ್**

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

Prop. : *Kishore Kumar Kedige*
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

# ನದಿಗಳು - ಸ್ನಾನ - ಮಾಘಮಾಸದ ಪಾವಿತ್ರ್ಯತೆ

**ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।**
**ನರ್ಮದೇ ಸಿಂಧು ಕಾವೇರಿ ಜಲೇsಸ್ಮಿನ್ ಸನ್ನಿಧಿಂ ಕುರು ॥**

ಮೇಲಿನ ಶ್ಲೋಕವನ್ನು ಎಲ್ಲರೂ ಹೇಳಿ ಸಪ್ತನದಿಗಳ ಸ್ಮರಣೆಯನ್ನು ಮಾಡುತ್ತಾರೆ. ಮನೆಯಲ್ಲಿ, ನದಿಗಳಲ್ಲಿ ಸ್ನಾನ ಮಾಡುವಾಗ ಮತ್ತು ಪೂಜಾಕಾಲಗಳಲ್ಲಿ, ಮೇಲಿನ ಮಂತ್ರವನ್ನು ಹೇಳಿ ಕಲಶದಲ್ಲಿ ಈ ಪುಣ್ಯನದಿಗಳನ್ನು ಆಹ್ವಾನಿಸುತ್ತಾರೆ. ಪುಣ್ಯನದಿಗಳ ಮತ್ತು ಸಂಗಮದಲ್ಲಿ ಸ್ನಾನ ಮಾಡುವುದನ್ನು ನಾವು ಕಾಣುತ್ತೇವೆ. ಇದರಿಂದ ನದಿಗಳ ಪಾವಿತ್ರ್ಯತೆಯ ವಿಷಯವಾಗಿ ತಿಳಿಯುತ್ತದೆ. ಜಲ ಎಂಬುದು ಬಹಳ ಪವಿತ್ರವಾದುದು. ವೇದಗಳ ಕಾಲದಿಂದಲೂ ನೀರಿನ ಬಗ್ಗೆ ತಿಳಿಸಲಾಗಿದೆ. ಜಲವಿಲ್ಲದೆ ಯಾರೂ ಜೀವಿಸಲಾರರು. ಜಲವೇ ಎಲ್ಲರಿಗೂ ಆಧಾರ. ಜಲದಿಂದ ವಿದ್ಯುತ್ಶಕ್ತಿ, ಜೀವೋತ್ಪತ್ತಿಗೆ ಕಾರಣ. ಅಂತ್ಯಕಾಲದ ಸಮಯದಲ್ಲಿ ಪವಿತ್ರ ಗಂಗಾಜಲವನ್ನು ಬಾಯಿಯಲ್ಲಿ ಹಾಕುತ್ತಾರೆ. ತರ್ಪಣ ಕಾಲದಲ್ಲಿ ಜಲ ತರ್ಪಣ ಕೊಡುತ್ತಾರೆ. ಯಾವ ವಸ್ತುವನ್ನು ದಾನ ಕೊಡಬೇಕಾದರೂ, ದಾನ ಸಂಪನ್ನವಾಗಿ ಫಲಕೊಡಲು ಸಹಧರ್ಮಿಣಿಯು ಎರಡು ಉದ್ಧರಣೆಯ ನೀರನ್ನು ಹಾಕಿ 'ನಮಮ' ಎಂದು ಹೇಳುತ್ತಾರೆ. ಈ ದಾನ ನನಗೆ ಸೇರಿದ್ದಲ್ಲ ಎಂದು ಹೇಳಿದಾಗ ಮಾತ್ರವೇ ಅದಕ್ಕೆ ಫಲ. ವಿವಾಹ ಕಾಲದಲ್ಲಿಯೂ ಸಹ 'ಕನ್ಯಾದಾನ' ಸಂದರ್ಭದಲ್ಲಿಯೂ ಪವಿತ್ರವಾದ ಗಂಗಾಜಲವನ್ನು ಹಾಕಿ ಕನ್ಯೆಯ ದಾನವನ್ನು ಮಾಡುತ್ತಾರೆ.

ನದಿಗಳು, ನಮ್ಮ ಭಾರತ ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ನದಿಯ ನೀರು ಪವಿತ್ರ ಮತ್ತು ಔಷಧ ಉಪಯುಕ್ತವಾದ ಗುಣಗಳನ್ನು ಹೊಂದಿರುತ್ತದೆ. ಕಾರಣ, ವಿಶೇಷವಾದ ಗಿಡಮೂಲಿಕೆಗಳು, ಲವಣಗಳು, ಲೋಹಗಳು ಮತ್ತು ಖನಿಜಗಳ ಮೂಲಕ ಹಾದುಬರುತ್ತದೆ. ಹಾಗೆ, ಪುಣ್ಯ ನದಿಗಳಲ್ಲಿ ಸ್ನಾನ ಮಾಡುವುದರಿಂದ ನಮ್ಮ ಅನೇಕ ಪಾಪಗಳು ಕಳೆಯುತ್ತವೆ. ಆದರೆ ತೀರ್ಥಕ್ಷೇತ್ರಗಳಲ್ಲಿ ಮಾಡಿದ ಪಾಪ, ವಜ್ರಲೇಪದಂತೆ ಗಟ್ಟಿಯಾಗುತ್ತದೆ. ಅದರಿಂದ, ನಾವುಗಳು ನದಿಗಳ ನೀರನ್ನು ಅಪವಿತ್ರ ಮಾಡಬಾರದು ಮತ್ತು ಕಲುಷಿತ ಮಾಡಬಾರದು. (ಅನ್ಯದೇಶಕೃತಂ ಪಾಪಂ ತೀರ್ಥಕ್ಷೇತ್ರೇಷು ನಶ್ಯತಿ । ತೀರ್ಥಕ್ಷೇತ್ರಕೃತಂ ಪಾಪಂ ವಜ್ರಲೇಪಾಯತೇ ಧ್ರುವಂ). ನಾವು ಬೇರೆಯ ಕಡೆ ಮಾಡಿದ ಪಾಪವು ನದಿಯ ಸ್ನಾನದಿಂದ ನಾಶವಾಗುತ್ತದೆ. ಆದರೆ ತೀರ್ಥಕ್ಷೇತ್ರದಲ್ಲಿ ಮಾಡಿದ ಪಾಪವು ವಜ್ರಲೇಪದಂತೆ ಅಂಟಿಕೊಳ್ಳುತ್ತದೆ.

ಸಾಧುಸಂತರು, ಋಷಿಗಳು, ತಮ್ಮ ಸಾಧನೆ, ಅನುಷ್ಠಾನ, ಉಪಾಸನೆಗಾಗಿ, ನದಿ ತೀರಗಳನ್ನು ಆಶ್ರಯಿಸಿದ್ದರು. ಮಂತ್ರಸಿದ್ಧಿಗೆ ಮತ್ತು ಸಂಗೀತ ಸಾಧನೆಗೆ ನದಿಯ ನೀರಿನಲ್ಲಿ ನಿಂತು ಸಾಧನೆ ಮಾಡುತ್ತಿದ್ದರು. ಶ್ರೀ ಗಣೇಶಾಥರ್ವಶೀರ್ಷ ಮಂತ್ರದ ಫಲಶ್ರುತಿಯಲ್ಲಿ, ಇತರ ಫಲಗಳ ಜೊತೆಗೆ, ಸೂರ್ಯಗ್ರಹಣದಂದು, ನದಿಯಲ್ಲಿ ನಿಂತೋ, ಗಣೇಶನ ಮುಂದೆ ನಿಂತೋ ಜಪಿಸಿದರೆ, ಮಂತ್ರ ಸಿದ್ಧಿಯಾಗುತ್ತದೆ. (ಸೂರ್ಯಗ್ರಹಣೇ ಮಹಾನದ್ಯಾಂ ಪ್ರತಿಮಾಸನ್ನಿಧೌ ವಾ ಜಪ್ತ್ವಾ ಸ ಸಿದ್ಧಮಂತ್ರೋ ಭವತಿ). ಹಾಗೆಯೇ, ನದಿಗಳ ತೀರದಲ್ಲಿ ನಾಗರಿಕತೆಗಳು ಉದ್ಭವಿಸಿವೆ. ನದಿಗಳು, ವ್ಯಾಪಾರ ಕೇಂದ್ರಗಳಾಗಿದ್ದುದನ್ನು ನಾವು ಚರಿತ್ರೆಗಳಲ್ಲಿ ಓದಿದ್ದೇವೆ ಮತ್ತು ಕೇಳಿದ್ದೇವೆ. ಅದರಿಂದ, ನದಿಗಳಿಗೆ ಪ್ರಾಮುಖ್ಯತೆ ಬಹಳವಿದೆ.

**ಮೇಲಿನ ಸ್ತೋತ್ರದಲ್ಲಿನ ಸಪ್ತನದಿಗಳ ಸಂಕ್ಷಿಪ್ತ ವಿವರಣೆ ಹೀಗಿದೆ.**

**ಗಂಗಾ :** ಗಂಗಾ ನದಿಯ ಉಗಮಸ್ಥಾನ, ಹಿಮಾಲಯದ 'ಗಂಗೋತ್ರಿ'ಯಲ್ಲಿ. ಗಂಗೆಗೆ ಅನೇಕ ಹೆಸರುಗಳಿವೆ. ಭಗೀರಥನು ಗಂಗೆಗಾಗಿ ತಪಸ್ಸು ಮಾಡಿ, ದೇವಗಂಗೆಯನ್ನು ಭೂಲೋಕಕ್ಕೆ ತಂದ ಕಾರಣ 'ಭಾಗೀರಥಿ'. ಭಗೀರಥನ ತಪಸ್ಸಿನ ವಿಷಯ ಎಲ್ಲರಿಗೂ ತಿಳಿದಿದೆ. ಭಗೀರಥನ ಗಂಗಾಸ್ತೋತ್ರ ಬಹಳ ಪ್ರಸಿದ್ಧಿಯಾಗಿದೆ. ಗಂಗೆ ಭೂಲೋಕಕ್ಕೆ ಬರುವಾಗ, 'ಜನ್ಹು ಋಷಿ'ಯ ಕಿವಿಯ ಮೂಲಕ ಬಂದ ಕಾರಣ 'ಜಾಹ್ನವಿ'ಯಾದಳು. ಗಂಗೆಯ ರಭಸವನ್ನು ತಡೆಯಲು, ಶಂಕರನು ತನ್ನ ಜಟೆಯಲ್ಲಿರಿಸಿಕೊಂಡಿದ್ದರಿಂದ, ಶಿವನು ಗಂಗಾಧರನಾದನು. ಗಂಗೆಯು ಗಂಗೋತ್ರಿಯಿಂದ, ಋಶೀಕೇಶದ ಮುಖಾಂತರ, ಹರಿದ್ವಾರಕ್ಕೆ ಬರುತ್ತಾಳೆ. ಇಲ್ಲಿನ ಗಂಗೆಯ ರೂಪ ಬಹಳ ಚೆನ್ನಾಗಿದೆ. 'ಹರ್ಕಿಪೌಡಿ'ಯ ಹತ್ತಿರ ಸ್ನಾನ ಬಹಳ ಚೆನ್ನಾಗಿರುತ್ತದೆ. ಇಲ್ಲಿನ ಸಂಜೆಯ ಗಂಗಾರತಿಯು ಬಹಳ ಸುಂದರವಾಗಿರುತ್ತದೆ. ಋಶೀಕೇಶ ಅಥವಾ ಹರಿದ್ವಾರದಲ್ಲಿಯೇ ಗಂಗೆಯನ್ನು ತರುವುದು. ಈ ಜಲವನ್ನು ನಂತರ ಸ್ಥಾಲಿಗಳಲ್ಲಿಟ್ಟು ಅದನ್ನು ವಿಧಿಪೂರ್ವಕವಾಗಿ ಪೂಜಿಸುತ್ತಾರೆ. ಈ ಪವಿತ್ರ ಗಂಗಾಜಲ, ಎಷ್ಟು ದಿನ ಇಟ್ಟರೂ ಸ್ವಲ್ಪವು ಕಲುಷಿತವಾಗುವುದಿಲ್ಲ, ಶುಭ್ರವಾಗಿರುತ್ತದೆ. ಗಂಗಾ ಮಾತೆಯನ್ನು ಎಲ್ಲರು ಹಾಡಿ ಹೊಗಳಿದ್ದಾರೆ. ವಾಲ್ಮೀಕಿ, ಶ್ರೀ ಶಂಕರಾಚಾರ್ಯರು, ತಮ್ಮ ಗಂಗಾ ಸ್ತೋತ್ರದಲ್ಲಿ (ದೇವಿ ಸುರೇಶ್ವರಿ...) ಮತ್ತು ಗಂಗಾಷ್ಟಕದಲ್ಲಿ ಗಂಗೆಯನ್ನು ಹೊಗಳಿದ್ದಾರೆ. ಶ್ರೀ ಜಯದೇವ ಕವಿಯು ಗಂಗೆಯನ್ನು ತನ್ನ 'ಗಂಗಾಸ್ತವ'ದಲ್ಲಿ ಸ್ತೋತ್ರ ಮಾಡಿದ್ದಾರೆ. 'ಗಂಗಾ ಸ್ನಾನ ಮಹಾತ್ಮೆ' ಎಂಬ ಗ್ರಂಥವೇ ಇದೆ. ದ. ರಾ. ಬೇಂದ್ರೆಯವರ ಗಂಗಾವತರಣ ಬಹಳ ಚೆನ್ನಾಗಿದೆ. ಗಂಗೆಯನ್ನು ಇಳಿದು ಬಾ ತಾಯೇ, ಇಳಿದು ಬಾ ಎಂದು ಪ್ರಾರ್ಥಿಸಿದ್ದಾರೆ. ಈ ಪ್ರಾರ್ಥನೆ ಬರಗಾಲ ಕಳೆಯಲು ಗಂಗೆಯನ್ನು ಪ್ರಾರ್ಥಿಸಿದರು ಎಂದು ತಿಳಿದು ಬರುತ್ತದೆ. ಈ ಗಂಗಾವತರಣದ ಹಾಡು ಕೇಳಲು ಬಹಳ ಆನಂದವಾಗುತ್ತದೆ. ಭೀಷ್ಮ ಪಿತಾಮಹನ ತಾಯಿ ಗಂಗಾದೇವಿ ಎಂಬುದು ಎಲ್ಲರಿಗೂ ತಿಳಿದಿದೆ. ಗಂಗೆಯು ಅಲಹಾಬಾದಿನಲ್ಲಿ ಇತರ ನದಿಗಳೊಡನೆ ಸೇರುತ್ತಾಳೆ. ಈ ಸ್ಥಳ, ಪ್ರಯಾಗ ರಾಜ ಎಂದು ಪ್ರಸಿದ್ಧಿಯಾಗಿದೆ. ಇಲ್ಲಿ ಕುಂಭಮೇಳವಾಗುತ್ತದೆ. ಇಲ್ಲಿ ಸಾಧು ಸಂತರು ಭಾಗವಹಿಸಿ ಪುನೀತರಾಗುತ್ತಾರೆ. ಇಲ್ಲಿನ ಪುಣ್ಯಸ್ನಾನ ಬಹಳ ಪ್ರಸಿದ್ಧಿಯಾಗಿದೆ. ಇಲ್ಲಿ ಸುಮಂಗಲಿಯರು ವೇಣಿ ದಾನವನ್ನು ಮಾಡುತ್ತಾರೆ. ವಾರಾಣಾಸಿಯಲ್ಲಿಯೂ ಗಂಗೆ ಹರಿಯುತ್ತಾಳೆ.

**ಯಮುನಾ :** ಯಮ ಮತ್ತು ಯಮುನಾ ಸೂರ್ಯನ ಮಕ್ಕಳು. ನದಿಯ ನೀರಿನ ಬಣ್ಣ ಸ್ವಲ್ಪ ಕಪ್ಪು. ಹಿಮಾಲಯದ ಯಮುನೋತ್ರಿಯಲ್ಲಿ ಯಮುನೆಯ ಉಗಮ. ಪ್ರಯಾಗದಲ್ಲಿ (ಅಲಹಾಬಾದ್) ಯಮುನೆಯು ಗಂಗೆಯನ್ನು ಸೇರುತ್ತಾಳೆ. ಕೆಲವು ವ್ರತಗಳಲ್ಲಿ, ಯಮುನಾ ಪೂಜೆಯನ್ನು ಮಾಡಿ ನಂತರ ವ್ರತವನ್ನು ಮಾಡುತ್ತಾರೆ. ಶ್ರೀ ಶಂಕರರು ಯಮುನಾಷ್ಟಕವನ್ನು ರಚಿಸಿದ್ದಾರೆ. ಯಮುನಾ ನದಿಯ ತೀರದಲ್ಲಿರುವ ಮಥುರಾ ಕ್ಷೇತ್ರವು ಶ್ರೀ ಕೃಷ್ಣನ ಜನ್ಮಸ್ಥಳ. ಎಲ್ಲರಿಗೂ ತಿಳಿದ ಹಾಗೆ, ಶ್ರೀ ಕೃಷ್ಣನು ಯಮುನಾ ನದಿಯಲ್ಲಿ ಅಡಗಿದ್ದ ಕಾಲಂದಿ ಸರ್ಪವನ್ನು ಸಂಹಾರ ಮಾಡಿದ. ಈ ದೃಶ್ಯದ ದಾಸರ ಹಾಡನ್ನು, 'ಆಡಿದನೋ ರಂಗಾ, ಕುಣಿದಾಡಿದನೋ ಕಾಳಿಂಗನ ಫಣೆಯಲಿ......' ಎಲ್ಲರೂ ಕೇಳಿದ್ದಾರೆ.

**ಗೋದಾವರಿ :** ಗೋದಾವರಿ ಮಹಾರಾಷ್ಟ್ರದ ನಾಶಿಕದಲ್ಲಿ ಉಗಮ. ಪವಿತ್ರವಾದ ಜ್ಯೋತಿರ್ಲಿಂಗಗಳಲ್ಲಿ ಒಂದಾದ ತ್ರ್ಯಂಬಕೇಶ್ವರ ಸನ್ನಿಧಿಯಿದೆ. ದೇವಾಲಯದ ಹಿಂದಿರುವ ಬ್ರಹ್ಮಗಿರಿಯಲ್ಲಿ ಉಗಮ. ಗೋದಾವರಿಗೆ ಗೌತಮಿ ಎಂಬ ಇನ್ನೊಂದು ಹೆಸರಿದೆ. ಈ ಹೆಸರಿನ ಹಿಂದೆ ಒಂದು ವಿಶೇಷತೆಯಿದೆ. ಈ ನದಿಗೆ ಪವಿತ್ರ ನದಿಗಳಲ್ಲಿ 3ನೇ ಸ್ಥಾನ ಮತ್ತು ದೊಡ್ಡ ನದಿಗಳಲ್ಲಿ 2ನೇ ಸ್ಥಾನವಿದೆ. ಈ ನದಿಯು ಆಂಧ್ರಪ್ರದೇಶದ ರಾಜಮುಂಡ್ರಿಯಲ್ಲಿ ಹರಿಯುತ್ತದೆ. ಇಲ್ಲಿನ ನದಿಯ ವಾತಾವರಣ ಬಹಳ ಚೆನ್ನಾಗಿದೆ. ನದಿಯಲ್ಲಿ ನಾವು ಸ್ಟೀಮರ್‌ನಲ್ಲಿ ಹೋಗಬಹುದು. 'ಪಾಪಟಿಕೊಂಡಲು' ದರ್ಶನ ಮಾಡಬಹುದು. ಇಲ್ಲಿಂದ, ನಾವು ಭದ್ರಾಚಲಕ್ಕೆ ದೋಣಿಯಲ್ಲಿ ಹೋಗಬಹುದು.

**ಸರಸ್ವತೀ :** ಈಗ ಸರಸ್ವತೀ ನದಿಯನ್ನು ಹುಡುಕಬೇಕು. ಸರಸ್ವತೀ ಮತ್ತು ದೃಷದ್ವತಿ ನದಿಗಳ ಮಧ್ಯಭಾಗವನ್ನು 'ಬ್ರಹ್ಮಾವರ್ತ' ಎಂದು ಕರೆಯುತ್ತಾರೆ. ಈ ನದಿಯು, ಹಿಮಾಲಯ ದಿಂದ ಗುಪ್ತಗಾಮಿನಿಯಾಗಿ ಬಂದು ರಾಜಸ್ಥಾನದ ಮರಳಿನಲ್ಲಿ ಅದೃಶ್ಯಳಾಗಿದ್ದಾಳೆಂದು ಹೇಳುತ್ತಾರೆ. ಸರಸ್ವತೀ ನದಿಯ ಬಗ್ಗೆ ಶೋಧನೆ ನಡೆಯುತ್ತಿದೆ. ವೇದಗಳ ಕಾಲದಿಂದಲೂ, ಈ ನದಿಯು ಪ್ರಸಿದ್ಧಿಯಾಗಿದೆ. ಸರಸ್ವತಿ ಸೂಕ್ತ ಮತ್ತು ಇನ್ನೂ ಅನೇಕ ಮಂತ್ರಗಳನ್ನು ನಾವು ಕಾಣಬಹುದು. ಮಹಾಭಾರತದಲ್ಲಿಯೂ ಉಲ್ಲೇಖವಿದೆ. ಈ ನದಿಯು, ಅಲಹಾಬಾದಿನಲ್ಲಿ ಗುಪ್ತಗಾಮಿನಿಯಾಗಿ ಸೇರುತ್ತಾಳೆ. (ಗಂಗಾ–ಯಮುನಾ–ಸರಸ್ವತಿ (ತ್ರಿವೇಣಿ ಸಂಗಮ). ಈ ನದಿ ದಡದಿಂದ ಬಂದವರು ಸಾರಸ್ವತರೆಂದು ಪ್ರಸಿದ್ಧಿಯಾಗಿದ್ದಾರೆ. ಸರಸ್ವತಿ ನದಿಗೆ 7 ಹೆಸರುಗಳಿವೆ. ಸುಪ್ರಭಾ, ಕಾಂಚನಾಕ್ಷಿ, ವಿಶಾಲ, ಮನೋರಮ, ಓಘವತಿ, ಸುರೇಣು, ವಿಮಲೋದಕ. ಈ ಹೆಸರುಗಳು ಬರಲು ಅನೇಕ ಸಂಗತಿಗಳಿವೆ.

**ನರ್ಮದಾ :** ಇದು ಶಿವನ ಬೆವರಿನಿಂದ ಉತ್ಪತ್ತಿಯಾಯಿತೆಂದು ತಿಳಿದು ಬರುತ್ತದೆ. ಇಲ್ಲಿ ಓಂಕಾರೇಶ್ವರ ಜ್ಯೋತಿರ್ಲಿಂಗವಿದೆ. ಈ ನದಿ ಸುಖವನ್ನು ಕೊಡುವಳು ಮತ್ತು ಭಾರತದ ಅತ್ಯಂತ ದೊಡ್ಡ ನದಿಯೆಂದು ಹೇಳುತ್ತಾರೆ. ವಿಂಧ್ಯಾ ಪರ್ವತದ ಅಮರ ಕಂಟಕವೆಂಬ ಸ್ಥಳದಲ್ಲಿ ಹುಟ್ಟುತ್ತದೆ. ಆತ್ಮಸಂನ್ಯಾಸದ ನಂತರ, ಶ್ರೀ ಶಂಕರರು ಗುರುವನ್ನು ಹುಡುಕಿಕೊಂಡು ಬಂದ ಜಾಗವಿದು. ಇಲ್ಲಿ ನಾವು ಕೆಲವು ಕುರುಹುಗಳನ್ನು ಕಾಣಬಹುದು. ಶ್ರೀ ಶಂಕರರು ತಮ್ಮ ಕಮಂಡಲದಲ್ಲಿ ನದಿಯ ಪ್ರವಾಹವನ್ನು ತಡೆದರು ಎಂದು ತಿಳಿದುಬರುತ್ತದೆ. ನರ್ಮದಾ ನದಿಯನ್ನು ಕುರಿತು ನರ್ಮದಾ ಅಷ್ಟಕವನ್ನು ರಚಿಸಿದ್ದಾರೆ. ನರ್ಮದೆಯಲ್ಲಿ ಶಿವಲಿಂಗ ದೊರೆಯುತ್ತದೆ. ಇಲ್ಲಿ ಶಿವನು ಬಾಣಾಸುರನಿಗೆ ಪೂಜೆಗಾಗಿ ಒಂದು ಲಿಂಗವನ್ನು ಕರುಣಿಸಿದನು. ಆ ಲಿಂಗ ಬಾಣಲಿಂಗವೆಂದು ಪ್ರಸಿದ್ಧಿಯಾಯಿತು. ಇದಕ್ಕೆ ವಿಶೇಷವಾದ ಕಥೆಯಿದೆ.

ಶ್ರೀ ಬಿ. ಆರ್. ಶ್ರೀಕಂಠಯ್ಯ, ಬೆಂಗಳೂರು ✆ : 94494 57684

(ಮುಂದುವರಿಯುವುದು)




ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

# ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯ ಇದರ ವಿಸ್ತೃತ ಕಟ್ಟಡದ ದ್ವಿತೀಯ ಅಂತಸ್ತಿನ ಉದ್ಘಾಟನಾ ಸಮಾರಂಭ










ವಿಸ್ತೃತ ಕಟ್ಟಡದ ದ್ವಿತೀಯ ಅಂತಸ್ತಿನ ಉದ್ಘಾಟನಾ ಸಮಾರಂಭವು ತಾರೀಕು 13–02–2022ನೇ ರವಿವಾರ ನಡೆಯಿತು. ಶ್ರೀ ಶಾರದಾ ಭಜನಾ ಮಂಡಳಿ, ಮಂಗಳೂರು ಮತ್ತು ಶಿವರಂಜಿನಿ ಕಲಾಕೇಂದ್ರ, ಬೊಕ್ಕಸ ಇವರ ಭಜನಾ ಸೇವೆಯ ಬಳಿಕ ದಾನಿಗಳ ನಾಮಫಲಕ ಅನಾವರಣ, ದೀಪ ಪ್ರಜ್ವಲನೆ, ಬಳಿಕ ಸಭಾ ಕಾರ್ಯಕ್ರಮ ನಡೆಯಿತು. ಆನಂದಾಶ್ರಮ ಸೇವಾ ಟ್ರಸ್ಟ್, ಪುತ್ತೂರು ಸಂಚಾಲಕಿ ಡಾ। ಪಿ. ಗೌರಿ ಪೈ M.D., ದಾನಿಗಳಾದ ಶ್ರೀಮತಿ ಬೆಳ್ಳೆ ಶಾರದಾ ಸದಾನಂದ ರಾವ್, Lt. Col ಕೆ. ಆರ್. ಬೆಳ್ಳೆ, ಮಂಗಳೂರು ಮಹಾನಗರ ಪಾಲಿಕೆಯ ಉಪಪೌರರಾದ ಶ್ರೀಮತಿ ಸುಮಂಗಲಾ ರಾವ್ ಮುಖ್ಯ ಅತಿಥಿಗಳಾಗಿದ್ದರು. ಶ್ರೀಮತಿ ಕುಸುಮ ನವೀನ್‌ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್‌ರವರು ಪ್ರಾರ್ಥನೆ ಹಾಡಿದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಸ್ವಾಗತಿಸಿ, ಪ್ರಸ್ತಾವನೆಗೈದರು. ಗಣ್ಯರು ಶುಭಹಾರೈಸಿ, ಅಭಿನಂದಿಸಿದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಅಭಿವೃದ್ಧಿ ಕಾಮಗಾರಿಗಳ ಮಾಹಿತಿ ನೀಡಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಉಪಾಧ್ಯಕ್ಷ ಡಾ। ಎ. ಪಿ. ಕೃಷ್ಣ ಧನ್ಯವಾದ ನೀಡಿದರು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಸವಿತಾ ಬೆಳ್ಳೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಸಭಾದ ಪದಾಧಿಕಾರಿಗಳು, ಸದಸ್ಯರು, ಹಿತೈಷಿಗಳು, ವಸತಿನಿಲಯದ ನಿವಾಸಿಗಳು ಉಪಸ್ಥಿತರಿದ್ದು ಸಹಕರಿಸಿದರು.

ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರು




Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Sri Harsha Kumar Kedige, President, Shree Subrahmanya Sabha (R.), Kodialbail, Mangalore - 3
*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.